ಇಲ್ಲದಿರುವುದರಿಂದ, ಸರ್ವೋಚ್ಚ ನ್ಯಾಯಾಲಯಕ್ಕಾಗಲೀ ಅಥವಾ ಇನ್ನು ಯಾವುದೇ ನ್ಯಾಯಾಲಯಕ್ಕಾಗಲೀ ಮೇಲ್ಮನವಿ ಸಲ್ಲಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ

ರಾಜ್ಯ ಸರ್ಕಾರವು ಸರ್ಕಾರಿ ಹುದ್ದೆಗಳನ್ನು ರದ್ದುಪಡಿಸಿರುವ ಬಗ್ಗೆ

6/0 (450) ಶ್ರೀ ರವೀಂದ್ರನಾಥ ಎಸ್ ಎ (ಮಾಯಕೊಂಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಂದು ಸಾವಿರ ಸರ್ಕಾರಿ ಹುದ್ದೆಗಳನ್ನು ಸರ್ಕಾರ ರದ್ದುಪಡಿಸಿ ಆದೇಶ ಹೊರಡಿಸಿದೆಯೇ

ಆ) ಯಾವಾಗಿನಿಂದ ಈ ಆದೇಶ ಬರುತ್ತದೆ ಯಾವ ಯಾವ ಹುದ್ದೆಗಳನ್ನು ರದ್ದುಪಡಿಸಲಾಗಿದೆ

ಇ) ಇದರಿಂದ ಸರ್ಕಾರಕ್ಕೆ ವಾರ್ಷಿಕ ಉಳಿತಾಯವಾಗುವ ಮೊತ್ತ ಎಷ್ಟು

ಈ) ಭವಿಷ್ಯದ ಇನ್ನಷ್ಟು ಹುದ್ದೆಗಳನ್ನು ರದ್ದು ಪಡಿಸಲು ಸರ್ಕಾರ ಚಿಂತಿಸಿದೆ (ಯಾವ ಯಾವ ಇಲಾಖೆಯ ಯಾವ ಹುದ್ದೆಗಳು ವಿವರ ತಿಳಿಸುವುದು)

ಉ) ಈ ಕ್ರಮದಿಂದಾಗಿ ಆರ್ಥಿಕ ಮಿತವ್ಯಯ ಸಾಧಿಸಿದರೂ ಸಹ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವ ಆತಂಕ ಸರ್ಕಾರಕ್ಕಿಲ್ಲವೇ ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿದೆ

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಆಡಳಿತ ಸುಧಾರಣಾ ಆಯೋಗವು ಶಿಫಾರಸ್ಸು ಮಾಡಿದ್ದಂತೆ ವಿಭಾಗ ಮಟ್ಟದ ಹುದ್ದೆಗಳನ್ನು ರದ್ದುಗೊಳಿಸುವ ಪ್ರಸ್ತಾವನೆಯು ತೀವ್ರ ಪರಿಶೀಲನೆಯಲ್ಲಿದೆ ಸರ್ಕಾರದಲ್ಲಿ ಅನಾವಶ್ಯಕ ಹುದ್ದೆಗಳನ್ನು ಗುರುತಿಸಿ ರದ್ದುಪಡಿಸುವುದು ನಿರಂತರ ಕ್ರಮವಾಗಿದೆ

ಉ) ಇಲ್ಲ

ಐ ವಿ ಫ್ಲೂಯಿಡ್ ಖರೀದಿಯಲ್ಲಿನ ಅವ್ಯವಹಾರ

775 (54) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆರೋಗ್ಯ ಮತ್ತು ಕುಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಐ.ವಿ ಫ್ಲೂಯಿಡ್ ಖರೀದಿಯಲ್ಲಿ ಅವ್ಯವಹಾರ ಎಸಗಿದ ಜನರಲ್ ಮೆಡಿಕಲ್ ಸ್ಟೋರ್ಸ್‌ನ ನಿವೃತ್ತ ಹೆಚ್ಚುವರಿ ನಿರ್ದೇಶಕರ ವಿರುದ್ಧ ಲೋಕಾಯುಕ್ತ ವಿಚಾರಣೆ ನಡೆಸಿ ವರದಿ ಸಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಅಧಿಕಾರಿಯಿಂದ ಸುಮಾರು 70 ಲಕ್ಷ ರೂ ಗಳನ್ನು ವಸೂಲಿ ಮಾಡಬೇಕೆಂದು ಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?